# ಶೃಂಗೇರಿ ಜಗದ್ಗುರುಗಳವರಿಂದ ಕುಂದಾಪುರದಲ್ಲಿ ಶ್ರೀಶಂಕರ ಜಯಂತಿ ಆಚರಣೆ

ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠಾಧೀಶ್ವರರಾದ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು ಮೇ 6ರಿಂದ 10ರ ವರೆಗೆ ಕುಂದಾಪುರದ ಶ್ರೀ ಕುಂದೇಶ್ವರ ದೇವಸ್ಥಾನದಲ್ಲಿ ಶ್ರೀ ಶಂಕರ ಜಯಂತಿ ಮಹೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಿದರು.

ಗೋವಾ ರಾಜ್ಯ ಮತ್ತು ಉತ್ತರ ಕನ್ನಡದ ಜಗದ್ಗುರುಗಳು ಕರಾವಳೀ ಪ್ರದೇಶದ ಧರ್ಮಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿ, ಮೇ 4ರ ಸಂಜೆ 6 ಗಂಟೆಗೆ ಅಂಕೋಲದಿಂದ ಕುಂದಾಪುರಕ್ಕೆ ಆಗಮಿಸಿದ ಜಗದ್ಗುರುಗಳನ್ನು ಪೂರ್ಣಕುಂಭದೊಂದಿಗೆ ಸ್ವಾಗತಿಸಿ, ವೇದ - ವಾದ್ಯ ಘೋಷ ಹಾಗೂ ವಿವಿಧ ಸಾಂಸ್ಕೃತಿಕ ಜಾನಪದ ಮತ್ತು ಭಜನೆ ತಂಡಗಳ ಕಲಾ ಪ್ರದರ್ಶನದೊಂದಿಗೆ ಪುರ ಮೆರವಣಿಗೆ ನಡೆಸಿ ಕುಂದೇಶ್ವರ ದೇವಾಲಯಕ್ಕೆ ಕರೆ ತರಲಾಯಿತು. ಧೂಳೀ ಪಾದ ಪೂಜೆಯ ನಂತರ ಕುಂದಾಪುರದ ಸಮಸ್ತ ನಾಗರಿಕರ ಪರವಾಗಿ ಪುರಸಭಾಧ್ಯಕ್ಷ ಶ್ರೀ ಮೋಹನ ಶೆಣೈ ಅವರು ಸನ್ಮಾನ ಸಲ್ಲಿಸಿದರು. ಜಗದ್ಗುರುಗಳವರು ಆಶೀರ್ವಚನ, ಮಾಡುತ್ತಾ ಕುಂದಾಪುರದ ಜನತೆಯ ಧರ್ಮಶ್ರದ್ಧೆ ಮತ್ತು ಗುರುಭಕ್ತಿಯನ್ನು ಪ್ರಶಂಸಿಸಿದರು.

**ಪುಸ್ತಕ ಬಿಡುಗಡೆ**

ಮೇ 5ರ ಪೂರ್ವಾಹ್ನ ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಮಾಜದವರು ಸಾಮೂಹಿಕವಾಗಿ ಜಗದ್ಗುರುಗಳವರನ್ನು ಸಂದರ್ಶಿಸಿ, ಪಾದಪೂಜೆ ಮತ್ತು ಭಿಕ್ಷಾವಂದನೆ ಸಲ್ಲಿಸಿ ಆಶೀರ್ವಾದ ಪಡೆದರು. ಅಪರಾಹ್ನ 6-30ಕ್ಕೆ ನಡೆದ ಧಾರ್ಮಿಕ ಸಭೆಯಲ್ಲಿ ಡಾ। ಎಚ್.ವಿ. ನರಸಿಂಹಮೂರ್ತಿಯವರ 'ಶ್ರೀ ಶಂಕರಾಚಾರ್ಯರ ಜೀವನ ಮತ್ತು ಸಂದೇಶ' ಎಂಬ ಗ್ರಂಥದ ದ್ವಿತೀಯ ಆವೃತ್ತಿಯನ್ನು ಬಿಡುಗಡೆಗೊಳಿಸಿ ಧರ್ಮಪ್ರವಚನ ಮಾಡಿದರು.

**ಧಾರ್ಮಿಕ ಕಾರ್ಯಕ್ರಮಗಳು**

ಪ್ರತಿ ದಿನ ಪೂರ್ವಾಹ್ನ 9ರಿಂದ ಶ್ರೀ ಶಂಕರಾಚಾರ್ಯರ ಸನ್ನಿಧಿಯಲ್ಲಿ ಪ್ರಸ್ಥಾನತ್ರಯ ಭಾಷ್ಯಾದಿ ಪಾರಾಯಣ ಸಹಸ್ರನಾಮಾರ್ಚನೆ ಮತ್ತು ಯಾಗಶಾಲೆಯಲ್ಲಿ ಅನುಕ್ರಮವಾಗಿ ದ್ವಾದಶನಾರಿಕೇಳ ಗಣಯಾಗ, ಲಕ್ಷ್ಮೀನಾರಾಯಣ ಹೃದಯಹೋಮ, ಲಲಿತಾ ಹವನ,ಚಂಡಿಕಾ ಹೋಮ ಮತ್ತು ರುದ್ರ ಹೋಮಗಳು ಹಾಗೂ ಸಂಜೆ 8ರಿಂದ ಶ್ರೀ ಶ್ರೀಗಳವರಿಂದ ಶ್ರೀ ಶಾರದಾ ಚಂದ್ರ ಮೌಳೀಶ್ವರ ಪೂಜೆ ನಡೆಯಿತು. ಮೇ 10ರ ಸಂಜೆ 7ರಿಂದ ಶ್ರೀ ಶಂಕರಾಚಾರ್ಯರ ವಿಗ್ರಹದ ವೈಭವದ ಪುರ ಮೆರವಣಿಗೆ ಏರ್ಪಡಿಸಲಾಯಿತು.

**ವೇದ ವಿದ್ವಾಂಸರ ಸಮ್ಮೇಳನ**

ಮೇ 6ರಿಂದ 10ರ ವರೆಗೆ ಜಗದ್ಗುರು ಮಹಾ ಸಂಸ್ಥಾನದ 'ವೇದಪೋಷಕ ಸಭಾ'ದ ಆಶ್ರಯದಲ್ಲಿ 'ಶ್ರೀ ಭಾರತೀತೀರ್ಥ ಕೃಪಾ' ಸಭಾಂಗಣದಲ್ಲಿ ನಡೆದ ವೇದ ಸಮ್ಮೇಳನದಲ್ಲಿ ಸುಮಾರು 150ಕ್ಕೂ ಹೆಚ್ಚು ವೇದ ವಿದ್ವಾಂಸರು ಭಾಗವಹಿಸಿದ್ದರು. ಹನ್ನೆರಡು ಮಂದಿ ವಿದ್ವಾಂಸರು ಘನ ಮತ್ತು ಶ್ರವಾಂತ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ಜಗದ್ಗುರುಗಳವರಿಂದ ಪುರಸ್ಕೃತರಾದರು. ಇದೇ ಸಂದರ್ಭದಲ್ಲಿ ರಾಜಮುಂಡ್ರಿಯ ಶ್ರೀ ಪಾದ ಕೃಷ್ಣಮೂರ್ತಿ ಘನಪಾಠಿ (ಕೃಷ್ಣಯಜುರ್ವೇದ), ಕಾಂಚೀಪುರಂನ ಎನ್.ಕೆ. ಮಹಾದೇವ ಘನಪಾಠಿ (ಶುಕ್ಲಯಜುರ್ವೇದ) ಮತ್ತು ಪೂನಾದ ತುಕಾರಾಮ ದತ್ತಾತ್ರೇಯ ಮುಳೆ (ಋಗ್ವೇದ) ಇವರಿಗೆ ಬಂಗಾರದ ಉಂಗುರ ನೀಡಿ ಸನ್ಮಾನಿಸಲಾಯಿತು.

**ರಾಜ್ಯ ಮಟ್ಟದ ಸ್ಪರ್ಧೆ ಮತ್ತು ಉಪನ್ಯಾಸ ಮಾಲಿಕೆ ಮತ್ತು ವಿಶೇಷ ನಗದು ಬಹುಮಾನ**

ಉತ್ಸವದ ಅಂಗವಾಗಿ ಸಾರ್ವಜನಿಕರಿಗಾಗಿ ಪ್ರತಿದಿನ ಮಧ್ಯಾಹ್ನದ ನಂತರ 3-30ರಿಂದ ರಾಜ್ಯಮಟ್ಟದ 'ಭಜಗೋವಿಂದಂ' ಸ್ತೋತ್ರದ ಕಂಠಪಾಠ ಸ್ಪರ್ಧೆ, ಶ್ರೀ ಶಂಕರರ ಚಿತ್ರ ರಚನಾ ಸ್ಪರ್ಧೆ, ಶಂಕರರ ಕುರಿತು ರಸಪ್ರಶ್ನೆ ಸ್ಪರ್ಧೆ, 'ಸೌಂದರ್ಯಲಹರೀ' ಗಾಯನ ಸ್ಪರ್ಧೆ, ಮಾಣಿಕ್ಯಮಂಜರೀ' ಕಂಠಪಾಠ ಸ್ಪರ್ಧೆ ಮತ್ತು ಪ್ರಬಂಧ ಸ್ಪರ್ಧೆಗಳನ್ನು ಅನುಕ್ರಮವಾಗಿ ಏರ್ಪಡಿಸಿ ಜಯಗಳಿಸಿದವರಿಗಾಗಿ ವಿಶೇಷ ಪುರಸ್ಕಾರ ನೀಡಲಾಯಿತು.

ಐದು ದಿನಗಳ ಉಪನ್ಯಾಸ ಮಾಲಿಕೆಯಲ್ಲಿ ಪ್ರತಿನಿತ್ಯ ಸಂಜೆ 5ಗಂಟೆಗೆ ಜಗದ್ಗುರುಗಳವರ ಅಧ್ಯಕ್ಷತೆಯಲ್ಲಿ ಪ್ರಸಿದ್ಧ ವಿದ್ವಾಂಸರಾದ ಡಾ। ಪಾದೆಕಲ್ಲು ವಿಷ್ಣುಭಟ್ (ಶ್ರೀ ಶಂಕರಾಚಾರ್ಯರ ಜೀವನ ಮತ್ತು ಸಂದೇಶ) ಡಾ। ಪ್ರಭಾಕರ ಜೋಶಿ (ಭಾರತೀಯ ತತ್ತ್ವಶಾಸ್ತ್ರದ ಮೇಲೆ ಶ್ರೀ ಶಂಕರಾಚಾರ್ಯರ ಪ್ರಭಾವ), ಕುಂಬ್ಳೆ ಸುಂದರರಾವ್ (ಭಾರತೀಯ ಸಂಸ್ಕೃತಿಯ ಪುನರುತ್ಥಾನದಲ್ಲಿ ಶ್ರೀ ಶಂಕರಾ ಚಾರ್ಯರ ಪಾತ್ರ), ಚಕ್ರವರ್ತಿ ಸೂಲಿಬೆಲೆ (ರಾಷ್ಟ್ರೀಯ ಏಕತೆಗೆ ಶ್ರೀ ಶಂಕರಾಚಾರ್ಯರ ಕೊಡುಗೆ) ಮತ್ತು ಡಾ। ನಿಟಿಲಾಪುರ ಕೃಷ್ಣಮೂರ್ತಿ (ಅವಿಭಕ್ತ ದಕ್ಷಿಣ ಕನ್ನಡದಲ್ಲಿ ಶ್ರೀ ಶಂಕರಾಚಾರ್ಯರ ದಿಗ್ವಿಜಯ ಯಾತ್ರೆ ಮತ್ತು ಪ್ರಭಾವ) ಉಪನ್ಯಾಸ ನೀಡಿದರು.

**ದುರ್ಬಲ ವರ್ಗದವರಿಗೆ ಕೊಡುಗೆ**

ಆರ್ಥಿಕವಾಗಿ ತೀರಾ ಹಿಂದುಳಿದ ದುರ್ಬಲ ವರ್ಗದವರನ್ನು ಶೃಂಗೇರಿ ಶಾರದಾ ಪೀಠದ ಹಲವು ಕೊಡುಗೆಗಳಿಗಾಗಿ ಮೊದಲೇ ಆಯ್ಕೆ ಮಾಡಿದ್ದು, ಅಂಗವಿಕಲರಿಗೆ ತಜ್ಞವೈದ್ಯರ ಶಿಫಾರಸ್ಸಿನಂತೆ ತ್ರಿಚಕ್ರ ಸೈಕಲ್, ಗಾಲಿಕುರ್ಚಿ, ಶ್ರವಣ ಸಾಧನ, ವೈಜ್ಞಾನಿಕ ಊರುಗೋಲು ಇತ್ಯಾದಿ ಉಪಕರಣಗಳನ್ನು, ಹೊಲಿಗೆಯಲ್ಲಿ ತರಬೇತಿ ಪಡೆದ ದುರ್ಬಲ ಮಹಿಳೆಯರಿಗೆ ಹೊಲಿಗೆ ಯಂತ್ರಗಳನ್ನು ಹಾಗೂ ಬಡ ಅನಾಥ ಮಹಿಳೆಯರಿಗೆ ಸೀರೆಗಳನ್ನು ಉಚಿತವಾಗಿ ನೀಡಲಾಯಿತು. ಜಗದ್ಗುರುಗಳವರು ಫಲಾನುಭವಿಗಳನ್ನು ಆಶೀರ್ವದಿಸಿ, ಇವುಗಳ ಸದುಪಯೋಗ ಪಡೆದು ಬದುಕನ್ನು ಹಸನಾಗಿಸಿಕೊಳ್ಳಿ ಎಂದು ಆಶೀರ್ವದಿಸಿದರು. ಜನರು ಭಾಗವಹಿಸಿ, ಲಕ್ಷಾಂತರ ರೂಪಾಯಿಗಳ ಕೊಡುಗೆಗಳನ್ನು ಸ್ವೀಕರಿಸಿ, ಧನ್ಯರಾದರು.

**ಸಾಂಸ್ಕೃತಿಕ ಕಾರ್ಯಕ್ರಮ**

ಪ್ರತಿನಿತ್ಯ ಸಂಜೆ 7ರಿಂದ ಶ್ರೀ ಕುಂದೇಶ್ವರ ಬಯಲು ರಂಗಮಂಟಪದಲ್ಲಿ ಸಿತಾರ್‌ವಾದನ (ವಿದ್ವಾನ್ ಐರೋಡಿ ಅವಿನಾಶ ಹೆಬ್ಬಾರ್), ಶಾಸ್ತ್ರೀಯ ಸಂಗೀತ (ವಿದುಷಿ ವಿಜಯ ವಾಣಿ ನಲಿಯೂರು), ಸ್ಯಾಕ್ಸೊಫೋನ್ ವಾದನ (ಕು। ಅಕ್ಷತಾ ಸಾಲಿಗ್ರಾಮ), ನಾಮಸಂಕೀರ್ತನೆ (ರವೀಂದ್ರ ಕೆ. ಮತ್ತು ಬಳಗ) ಮತ್ತು ಹರಿಕಥೆ ಶ್ರೀ ಶಂಕರಾಚಾರ್ಯರು (ವಿದ್ವಾನ್ ನೀ... ಗಣೇಶ ಭಟ್) ಮೊದಲಾದ ಸದಭಿರುಚಿಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

**ಪದ್ಮಶ್ರೀ ಗೌರೀ ಶಂಕರರಿಗೆ ಸನ್ಮಾನ**

ಇತ್ತೀಚೆಗೆ ಭಾರತ ಸರಕಾರದಿಂದ 'ಪದ್ಮಶ್ರೀ' ಪ್ರಶಸ್ತಿಗೆ ಆಯ್ಕೆಗೊಂಡ ಶೃಂಗೇರಿ ಶ್ರೀ ಶಾರದಾ ಪೀಠದ ಸಮರ್ಥ ಆಡಳಿತಾಧಿಕಾರಿ ಶ್ರೀ ವಿ. ಆರ್. ಗೌರೀಶಂಕರ್ ಅವರನ್ನು ಪೇಟ ಮತ್ತು ಶಾಲು ತೊಡಿಸಿ, ಗೀತೋಪದೇಶದ ಪ್ರತಿಕೃತಿ ಮತ್ತು ರಜತ ಹರಿವಾಣ, ಬೆಳ್ಳಿಯ ಕಾಲುದೀಪ, ಫಲ-ಪುಷ್ಪ-ಹಾರ ಇತ್ಯಾದಿಗಳೊಂದಿಗೆ ಸನ್ಮಾನಿಸಲಾಯಿತು. ಶ್ರೀ ಎಂ. ಸುಕುಮಾರ ಶೆಟ್ಟಿ ಶಿವಾನಂದ ಕಾರಂತ ಮತ್ತು ಡಾ। ಎಚ್. ವಿ. ನರಸಿಂಹ ಮೂರ್ತಿ ಅಭಿನಂದನಾ ಭಾಷಣ ಮಾಡಿದರು. ಅವಿಭಕ್ತ ದಕ್ಷಿಣ ಕನ್ನಡದ ಶೃಂಗೇರಿ ಶ್ರೀ ಮಠದ ಅನೇಕ ಮಂದಿ ಶಿಷ್ಯ ವರ್ಗದವರು ಮತ್ತು ಸಂಘ ಸಂಸ್ಥೆಗಳವರು ಹಾರಾರ್ಪಣೆ ಮಾಡಿ ಗೌರವಿಸಿದರು.

**ಜಗದ್ಗುರುಗಳ ಪ್ರವಚನ**

ಜಗದ್ಗುರುಗಳವರು ಮೇ 4, 5 ಮತ್ತು 10ರಂದು ವಿಶೇಷ ಪ್ರವಚನ ನೀಡಿ, ಆದಿಶಂಕರರು ಮಾಡಿದ ಲೋಕೋಪಕಾರಗಳು, ಅವರ ಪ್ರಸನ್ನ ಗಂಭೀರವಾದ ಭಾಷ್ಯಗಳು, ಶೃಂಗೇರಿ ಶ್ರೀ ಶಾರದಾ ಪೀಠದ ವೇದ ಪೋಷಕ ಸಭಾದ ಆಶ್ರಯದಲ್ಲಿ ನಡೆಯುತ್ತಿರುವ ವೇದ ಸಂರಕ್ಷಣಾ ಕಾರ್ಯ - ಇತ್ಯಾದಿ ಕುರಿತು ಮಾತನಾಡಿ, ಸನಾತನ ಧರ್ಮದ ಪರಮೋದ್ಧಾರಕರಾದ ಶ್ರೀ ಶಂಕರಾಚಾರ್ಯರ ಸಂಸ್ಮರಣೆ ಎಂದೆಂದಿಗೂ ಪ್ರಸ್ತುತ ಎಂದು ಯುಕ್ತಾಯುಕ್ತವಾಗಿ ಪ್ರತಿಪಾದಿಸಿದರು.

**ಇತರ ಚಟುವಟಿಕೆಗಳು**

ಮೇ 11ರ ಪೂರ್ವಾಹ್ನ ಕುಂದೇಶ್ವರ ದೇಗುಲದ ಬಳಿಯ ಎಚ್.ಎಂ.ಎಂ. ಶಾಲೆಗೆ ಸಂದರ್ಶನ ನೀಡಿ, ಅದರ ಆಡಳಿತ ವರ್ಗ ಮತ್ತು ಶಿಕ್ಷಕರನ್ನು ಆಶೀರ್ವದಿಸಿದರು. ನಂತರ ನಾಗಾಚಲ ಅಯ್ಯಪ್ಪ ಸ್ವಾಮಿ ದೇವಾಲಯದವರು ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿರುವ ನೂತನ ಭೋಜನ ಶಾಲೆಗೆ ಶಿಲಾನ್ಯಾಸ ಮಾಡಿ, ಅಯ್ಯಪ್ಪ ಸ್ವಾಮಿಯ ದರ್ಶನ ಕೈಗೊಂಡು, ಭಕ್ತಾದಿಗಳನ್ನು ಹರಸಿದರು. ಮಂಗಳೂರು ಟೈಲ್ಸ್ ನೂತನ ಘಟಕಕ್ಕೆ ಭೇಟಿ ನೀಡಿ, ಆಶೀರ್ವಚಿಸಿದರು. ಶೃಂಗೇರಿ ಧರ್ಮ ಸಂಸ್ಥಾನದ ಪರಂಪರಾಗತ ಶಿಷ್ಯರಾದ ರಾಮಕ್ಷತ್ರಿಯರ ಶ್ರೀ ಸೀತಾರಾಮಚಂದ್ರ ದೇವಸ್ಥಾನ ಮತ್ತು ಕೊಂಕಣ ಖಾರ್ವಿ ಸಮಾಜದವರ ಶ್ರೀ ಮಹಾಕಾಳಿ ದೇವಸ್ಥಾನಕ್ಕೆ ಸಂದರ್ಶನ ನೀಡಿ, ಶಿಷ್ಯಸ್ತೋಮವನ್ನು ಅನುಗ್ರಹಿಸಿದರು. ಅಪರಾಹ್ನ 3-30ಕ್ಕೆ ಉತ್ಸವಸಮಿತಿಯವರಿಗೆಲ್ಲ ಫಲ ಮಂತ್ರಾಕ್ಷತೆ ನೀಡಿ, ಮಂಗಳೂರಿನತ್ತ ಪಯಣಿಸಿದರು.

**-ಡಾ। ಎಚ್. ವಿ. ನರಸಿಂಹಮೂರ್ತಿ**

# ಲಕ್ಷ್ಮೀನೃಸಿಂಹ ನಿಗಮಾಗಮ ಪಾಠ ಶಾಲೆಯ ಯಜುಃ ಶಾಖೆ ಪ್ರಾರಂಭ

ಶ್ರೀಮತ್ ಸರ್ವಧಾರಿ ಸಂ। ವೈ. ॥ಶು॥ ಅಕ್ಷಯ ತೃತೀಯ ದಿನಾಂಕ 08–05–2008ರಂದು ಈಗಾಗಲೇ ನಡೆಯುತ್ತಿರುವ (ಋಗ್ವೇದ) ಲಕ್ಷ್ಮೀನೃಸಿಂಹ ನಿಗಮಾಗಮ ಪಾಠಶಾಲೆಯಲ್ಲಿ ಯಜುಃಶಾಖೆಯು ವಿಧ್ಯುಕ್ತವಾಗಿ ಪ್ರಾರಂಭಗೊಂಡಿತು.

ಎ.ಐ.ಎಂ. ಧಾರಂನ ಅಧ್ಯಕ್ಷರಾದ ಶ್ರೀ ದಯಾನಂದ ಸರಸ್ವತಿ ಸ್ವಾಮಿಗಳು ಯಜುಃ ಶಾಖೆಯನ್ನು ಉದ್ಘಾಟಿಸಿದರು.

ನೃಸಿಂಹಾಶ್ರಮ ಸ್ವಾಮಿಗಳು ಅಧ್ಯಕ್ಷ ಪೀಠದಿಂದ ಮಾತಾನಾಡುತ್ತಾ ಸಂಸ್ಕೃತದಿಂದ – ಸಂಸ್ಕೃತಿ – ಸಂಸ್ಕೃತಿಯಿಂದ ಸಂಪನ್ನತೆ ಹೇಗೆ ಎಂಬುದನ್ನೂ ಮನೋಜ್ಞವಾಗಿ ತಿಳಿಸಿದರು.

ಶ್ರೀ ಚಿದ್ರೂಪನಂದಜೀ ಸ್ವಾಮೀಜಿ, ಅರ್ಷ ವಿದ್ಯಾಪೀಠದ ಮುಖ್ಯಸ್ಥರು ಹುಬ್ಬಳ್ಳಿ ಶ್ರೀಮತಿ ಶೀಲಾ ಬಾಲಾಜಿ – ವ್ಯವಸ್ಥಾಪಕ ಸ್ವಾಮಿ ದಯಾನಂದ ಶಿಕ್ಷಣ ಸಂಸ್ಥೆ – ಕುಂಭಕೋಣಂ – ತಮಿಳುನಾಡು ಇವರುಗಳು ಮಾತನಾಡಿ – ವೇದಗಳ ಅರಿವು ಮಾನವನ ಏಳಿಗೆಗೆ ಹೇಗೆ ಸಹಕಾರಿಯಾಗುತ್ತದೆ ಎಂಬುದನ್ನು ಸಾಕ್ಷಿ ಸಹಿತ ವಿವರಿಸಿದರು.

ಪಾಠಶಾಲೆಯ ವ್ಯವಸ್ಥಾಪಕ ಶ್ರೀ ವಾಸುದೇವ ಭಟ್ಟರು ಕಾರ್ಯಕ್ರಮ ನಿರೂಪಿಸಿದರು. ಪಾಠಶಾಲೆಯ ಅಧ್ಯಾಪಕ ರಾಘವೇಂದ್ರರ ವೇದಘೋಷದೊಂದಿಗೆ ಕಾರ್ಯಕ್ರಮ ಪ್ರಾರಂಭಗೊಂಡಿತು.

ನಂತರ 8, 9 ಮತ್ತು 10 ಈ ಮೂರು ದಿನಗಳು ಬೆಳಿಗ್ಗೆ ಬಾಲಕರಿಗಾಗಿ ತಾಯಂದಿರಿಗಾಗಿ – ರಂಗೋಲಿ – ವೇದ ಕಂಠಪಾಠ ಸ್ಪರ್ಧೆ ಸಂಧ್ಯಾ ವಂದನೆ – ಭಗವದ್ಗೀತೆ, ಲಲಿತಾ ಸಹಸ್ರನಾಮ ಹೀಗೆ ವಿವಿಧ ರೀತಿಯ ಸ್ಪರ್ಧೆಗಳು – ನಂತರ ಧಾರ್ಮಿಕ ಉಪನ್ಯಾಸ ಪ್ರತಿದಿನ ಪಂಡಿತರಿಂದ ಶಂಕರತತ್ವದ ಹಿನ್ನಲೆಯಲ್ಲಿ ಉಪನ್ಯಾಸ – ಮಹಾಪೂಜೆ, ಅನ್ನದಾನ ರಾತ್ರಿ ಪ್ರತಿದಿನ ಡಾ। ವಸುಂಧರಾ ದೊರೆಸ್ವಾಮಿ ಯಂತವರಿಂದ ಉತ್ತಮ ಸಾಂಸ್ಕೃತಿಕ ಕಾರ್ಯಕ್ರಮಗಳು ಅತ್ಯಂತ ವ್ಯವಸ್ಥಿತವಾಗಿ ವಿಜೃಂಭಣೆಯಿಂದ ಜರುಗಿದವು.

ತತ್ಪೂರ್ವದಲ್ಲಿ ಅಂದರೆ ವರ್ಧಂತಿ ಪ್ರಯುಕ್ತ ಎಪ್ರಿಲ್ 14ರಿಂದ 21ರ ವರೆಗೆ ಋಕ್ ಸಂಹಿತಾ ಯಜುಃ ಸಂಹಿತಾ ಯಾಗಗಳು ಶಾಸ್ತ್ರೋಕ್ತವಾಗಿ ಸಂಪನ್ನಗೊಂಡವು. ಋಗ್ವೇದ – ಸಂಹಿತಾ ಯಾಗದ ಆಚಾರ್ಯರಾಗಿ ಕರ್ಣಾಟಕದ ಪ್ರಕಾಂಡ ಪಂಡಿತ ಧನಪಾಠಿ ಬೆಣ್ಣೆಗುಡ್ಡೆ ಶಂಕರ ಭಟ್ಟರ ನೇತೃತ್ವದಲ್ಲಿ ನಡೆಯಿತು. ಋಜು ಸಂಹಿತಾಯಾಗ ಧರ್ಮಸ್ಥಳದ ಘನಪಾಠಿ ಅಭಯಂಕರ ಮತ್ತು ಸಾಗರದ (ತಮಿಳುನಾಡಿನ) ವಿದ್ವಾಂಸ ಶ್ರೀ ಗಣೇಶ ಇವರಿಂದ ತುಂಬ ಯೋಗ್ಯ ರೀತಿಯಲ್ಲಿ ನಡೆಯಿತು. ಯಾಗದ ಜೊತೆಗೆ ಪ್ರತ್ಯಂಶಿರಾ, ನೃಸಿಂಹ, ಗಣಪತಿ ಹೋಮಗಳು ನಡೆಯುತ್ತಲೇ ಇದ್ದವು. ಪ್ರತಿದಿನ ಮಧ್ಯಾಹ್ನ ಅನ್ನದಾನ ಪ್ರತಿದಿನ ಸಾಯಂಕಾಲ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಅತ್ಯಂತ ವ್ಯವಸ್ಥಿತವಾಗಿ ಆತ್ಮೀಯ ಮತ್ತು ಆನಂದದಾಯಕ ವಾತಾವರಣದಲ್ಲಿ ಮಲೆನಾಡಿನ ಆತಿಥ್ಯದೊಂದಿಗೆ ಸಂಪನ್ನಗೊಂಡವು.

ಕೊನೆಯದಿನ ಪೂರ್ಣಾಹುತಿ ಅನ್ನದಾನ ಸಭೆ ನೃಸಿಂಹಾಶ್ರಮ ಸ್ವಾಮಿಗಳು ಅಧ್ಯಕ್ಷ ಪೀಠದಿಂದ ಮಾತನಾಡುತ್ತಾ ಜಗತ್ಕಲ್ಯಾಣ ಕಾರ್ಯದಲ್ಲಿ ಯಾಗಗಳ ಮಹತ್ವವನ್ನು ಮನಗಾಣಿಸಿದರು. ಶ್ರೀ ಶೃಂಗೇರಿ ಶಾರದಾ ಪೀಠದ ಪ್ರಾಂತೀಯ ಧರ್ಮಾಧಿಕಾರಿ ಶ್ರೀ ಎಚ್.ವಿ. ನರಸಿಂಹ ಮೂರ್ತಿಗಳು ಮಾತನಾಡಿ ಧರ್ಮದ ಮಹತ್ವವನ್ನು ತಿಳಿಸಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ಶ್ರೀ ಕೆ.ವಿ. ಗಣೇಶ ಉಡುಪರು ಮಾತನಾಡುತ್ತಾ ಗುರುಗಳ ಸಾಧನೆ ಜೊತೆಗೆ ಜಗತ್ತಿನ ನೆಮ್ಮದಿಗೆ ಧರ್ಮಪೀಠಗಳು ಆಧಾರ ಎಂಬ ಬಗೆಯನ್ನು ವಿವರಿಸಿದರು. ಬಿ.ವಿ. ಲಕ್ಷ್ಮೀನಾರಾಯಣ (ಬ್ಯಾಂಕ್ ನಿರ್ದೇಶಕರು) ಸ್ವಾಗತಿಸಿ ಶ್ರೀಪತಿ ಅಧಿಕಾರಿ ಧನ್ಯವಾದ ಸಮರ್ಪಿಸಿದರು. ನಾಡಗಣ್ಯರಿಂದ "ಗುರು ವಂದನಾ" ಕಾರ್ಯಕ್ರಮ ಯಶಸ್ವಿಯಾಯಿತು.

ಶ್ರೀಶಾರದಾ ದೇವಸ್ಥಾನದಲ್ಲಿ
ತಾ.12-07-2008ರ ಶನಿವಾರ
ಸಂಜೆ ಗಂಟೆ 5-30ರಿಂದ
**ಗಮಕವಾಚನ-ಪ್ರವಚನ**
ಕಾರ್ಯಕ್ರಮವು ನಡೆಯಲಿದೆ.
ವಾಚನ : ಭಾಗವತ, ಗಮಕಿ **ನೀಲಾವರ ಲಕ್ಷ್ಮೀನಾರಾಯಣರಾವ್**
ಪ್ರವಚನ : ಹವ್ಯಾಸಿ ತಾಳಮದ್ದಳೆ ಅರ್ಥಧಾರಿ, ನಾಟಕಕಾರ, ಪ್ರವಚನ'ಕಾರ
**ಶ್ರೀ ಬಾರ್ಕೂರು ನಾಗೇಶರಾವ್.**
ಸರ್ವರಿಗೂ ಆದರದ ಸ್ವಾಗತ
**- ಶ್ರೀಶಾರದಾ ದೇವಸ್ಥಾನ ವೇದಿಕೆ**

**ಸಾಮೂಹಿಕ ಗಣಹೋಮ**
ಶ್ರೀಶಾರದಾ ದೇವಸ್ಥಾನದಲ್ಲಿ
ಪ್ರತಿ ತಿಂಗಳು
**ಸಂಕಷ್ಟಹರ ಚತುರ್ಥಿಯಂದು**
ನಡೆಯುತಿರುವ
**ಸಾಮೂಹಿಕ ಗಣೆಹೋಮವು**
ತಾ.22-06-2008ರಂದು ಮತ್ತು
ಜುಲ್ಯಾ ತಿಂಗಳಲ್ಲಿ
21-07-2008ರಂದು ನಡೆಯಲಿದೆ.
**ಗಣಹೋಮ ಸೇವಾ ಶುಲ್ಕ ರೂ.51/-**
ಗಣಹೋಮ ಸೇವೆ ನೀಡಲು
ಇಚ್ಛಿಸುವವರು ಶಾರದಾ ಮಂಟಪದ
ಮೆನೇಜರ್‌ರವರನ್ನು ಸಂಪರ್ಕಿಸಲು
ಕೋರಲಾಗಿದೆ.
**- ಶ್ರೀಶಾರದಾ ದೇವಸ್ಥಾನ ವೇದಿಕೆ**